ಚಾಮರಾಜನಗರ ಜಿಲ್ಲೆ:

ಅಂತಹ ಪ್ರಕರಣಗಳಿಲ್ಲ.

ಈ) ಮೈಸೂರು ಜಿಲ್ಲೆ :

1. ಶ್ರೀಮತಿ ನಾಗರತ್ನ ರೂ. 20760.00
2. ಶ್ರೀ ಕೆ.ನಂಜಪ್ಪ ರೂ. 107125.89
3. ಶ್ರೀ ಅಕ್ರಮ್ ಮುಲ್ಲಾ ಷರಿಫ್ ರೂ. 70569.00

ಚಾಮರಾಜನಗರ ಜಿಲ್ಲೆ:

ಅಂತಹ ಪ್ರಕರಣಗಳಿಲ್ಲ.

ಉ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಸರ್ಕಾರಿ ಅಭಿಯೋಜಿಕರ ಮುಖಾಂತರ ಕಂಡಿಕೆವಾರು ಉತ್ತರಗಳನ್ನು ಸಲ್ಲಿಸಿ ಪ್ರಕರಣಗಳು ಶೀಘ್ರವಾಗಿ ಇತ್ಯರ್ಥವಾಗಲು ಕ್ರಮ ತೆಗೆದುಕೊಳ್ಳಲಾಗಿದೆ. ಇದು ಇತ್ಯರ್ಥವಾದ ನಂತರ ಬಾಕಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುವುದು.

ಕೈಗಾರಿಕೆ ನಿವೇಶನದಲ್ಲಿ ವಸತಿ ಕಟ್ಟಡ

1306(1636) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮವು ಅಭಿವೃದ್ಧಿ ಪ್ರದೇಶದಲ್ಲಿ ಕೈಗಾರಿಕಾ ನಿವೇಶನ ಪಡೆದು, ವಸತಿ ಉಪಯೋಗಕ್ಕೆ ಬಳಸಿರುವ ಕಟ್ಟಡಗಳ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದು ಕಾನೂನಿನ ಉಲ್ಲಂಘನೆಯಾದರೂ ಸಹಾ ಏಕೆ ಕ್ರಮ ಕೈಗೊಂಡಿಲ್ಲ?

ಇ) ಎಷ್ಟು ನಿವೇಶನಗಳನ್ನು ಈ ಸಂಬಂಧವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ?

ಈ) ಈ ರೀತಿ ಎಷ್ಟು ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದೆ. ವಸೂಲಾದ ದಂಡದ ಪ್ರಮಾಣವೆಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಒಂದು ವೇಳೆ ಈ ವಿಚಾರದಲ್ಲಿ ನಿರ್ದಿಷ್ಟ ಅಪಾದನೆ ಬಂದಲ್ಲಿ ಇದನ್ನು ಗಮನಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ಕೈಗಾರಿಕಾ ವಸಾಹತಿನಲ್ಲಿ ಕೆ.ಐ.ಎ.ಡಿ.ಬಿ. ಕಾಮಗಾರಿ

1307(1640) ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಕೈಗಾರಿಕಾ ವಸಾಹತಿನಲ್ಲಿ (ತಾಂಡ್ಯ ಬಿಟ್ಟು ನಂಜನಗೂಡು ಸೇರಿ) ಕೆಐಎಡಿಬಿ ಸಂಸ್ಥೆಯು 1999-2000, 2001-02 ರವರೆಗೆ ಕಾಮಗಾರಿಗಳಿಗಾಗಿ (ರಸ್ತೆ, ನೀರು, ವಿದ್ಯುಚ್ಛಕ್ತಿ, ದುರಸ್ತಿ ಮತ್ತು ಮೇಲ್ವಿಚಾರಣೆ) ಎಷ್ಟು ವೆಚ್ಚ ಮಾಡಿದೆ; ಕಾಮಗಾರಿವಾರು, ವರ್ಷವಾರು ವಿವರ ನೀಡುವುದು?